# ಅಂಧರಿಗೆ ಮನಿ ಆ್ಯಪ್

■ ಶಶಿಕುಮಾರ್ ಸಿ.




ಬದುಕನ್ನೇ ಕತ್ತಲೆಯಾಗಿಸಿಕೊಂಡಿರುವ ದೇಶದ ಲಕ್ಷಾಂತರ ಮಂದಿ ಅಂಧರಿಗೆ ತಮ್ಮ ಬಳಿ ಇರುವ ನೋಟುಗಳನ್ನು ಗುರುತಿಸಲು ಅನುಕೂಲವಾಗಲೆಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) 'ಮನಿ' (**Mani – Mobile Aided Note Identifier**) ಆ್ಯಪ್ ಅನ್ನು ಈಚೆಗೆ ಬಿಡುಗಡೆ ಮಾಡಿದೆ.

ಆಫ್‌ಲೈನ್ ಹಾಗೂ ಆನ್‌ಲೈನ್ ಎರಡೂ ವಿಧದಲ್ಲಿ ಇದು ಕಾರ್ಯನಿರ್ವಹಿಸಲಿದ್ದು, ಬಳಕೆಯು ಸುಲಭವಾಗಿದೆ. ಆ್ಯಂಡ್ರಾಯ್ಡ್ ಮತ್ತು ಐಫೋನ್ ಆಪರೇಟಿಂಗ್ ಸಿಸ್ಟಂ ಆಧಾರಿತ ಸ್ಮಾರ್ಟ್‌ಫೋನ್‌ಗಳಲ್ಲಿ ಇದನ್ನು ಬಳಸಬಹುದಾಗಿದ್ದು, ಗೂಗಲ್ ಪ್ಲೇ ಸ್ಟೋರ್ ಹಾಗೂ ಆ್ಯಪಲ್ ಆ್ಯಪ್ ಸ್ಟೋರ್‌ನಲ್ಲಿ ಲಭ್ಯ.

ಆ್ಯಪ್ ಡೌನ್‌ಲೋಡ್ ಮಾಡಿ ಇನ್‌ಸ್ಟಾಲ್ ಮಾಡಬೇಕು. ಬಳಿಕ ಅದನ್ನು ತೆರೆದ ಕೂಡಲೇ ಇಂಗ್ಲಿಷ್ ಹಾಗೂ ಹಿಂದಿ ಭಾಷೆಯ ಆಯ್ಕೆ ಕೇಳುತ್ತದೆ. ಆ ಪೈಕಿ ಒಂದು ಭಾಷೆಯನ್ನು ಆಯ್ಕೆ ಮಾಡಬೇಕು. ಆಯ್ಕೆ ಮಾಡಿಕೊಂಡ ಭಾಷೆಯಲ್ಲಿ ಮಾತ್ರ ಅದು ಧ್ವನಿ ಸಹಾಯ ಮಾಡುತ್ತದೆ.

ನಂತರ 'ಸ್ಮಾರ್ಟ್‌ಫೋನ್‌ನ ಕೆಲವೊಂದು ಆಯ್ಕೆಗಳನ್ನು ಬದಲಿಸಿ' ಎಂಬ ವಾಯ್ಸ್ ಕಮಾಂಡ್ ಪರದೆ ಮೇಲೆ ತೆರೆದುಕೊಳ್ಳುತ್ತದೆ. ಅದನ್ನು ಅನುಸರಿಸಿ ಸೆಟ್ಟಿಂಗ್ಸ್‌ಗೆ ಹೋಗಿ ಅಲ್ಲಿ ಕಾಣುವ ಅಸ್ಸೆಸಿಬಿಲಿಟಿ ಆಯ್ಕೆಯನ್ನು ಕ್ಲಿಕ್ಕಿಸಬೇಕು. ನಂತರ ಕಾಣುವ ಸ್ಕ್ರೀನ್ ರೀಡ್ ಆಯ್ಕೆಯನ್ನು ಒತ್ತಿದೊಡನೆ ಕಾಣುವ 'ವಾಯ್ಸ್ ಅಸಿಸ್ಟೆಂಟ್' ಅನ್ನು ಆನ್ ಮಾಡಬೇಕು. ಇದು ಅಂಧರು ಸುಲಭವಾಗಿ ಸ್ಮಾರ್ಟ್‌ಫೋನ್ ನಿರ್ವಹಿಸಲು ಧ್ವನಿ ಸಹಾಯವನ್ನು ಮಾಡುವ ವಿಧಾನವೂ ಆಗಿದೆ.

ಸೆಟ್ಟಿಂಗ್ಸ್ ಅನ್ನು ಒಮ್ಮೆ ಕ್ಲೋಸ್ ಮಾಡಿ ಮತ್ತೆ ಮನಿ ಆ್ಯಪ್ ತೆರೆಯಬೇಕು. ಆಗ ಪರದೆ ಮೇಲೆ ಸ್ಕ್ಯಾನ್ ಆಯ್ಕೆಯು ಸ್ವಯಂಚಾಲಿತವಾಗಿ ಆನ್ ಆಗುತ್ತೆ. ಅದರ ಮೂಲಕ ಅಂಧರು ತಮ್ಮ ಬಳಿ ಇರುವ ನೋಟನ್ನು ಸ್ಕ್ಯಾನ್ ಮಾಡಿದರೆ ಅದು ಎಷ್ಟು ಮೌಲ್ಯದ ನೋಟು ಎಂಬುದನ್ನು ಧ್ವನಿಯ ಮೂಲಕ ತಿಳಿಸುತ್ತದೆ. ಆ ಮೂಲಕ ಅಂಧರು ತಮ್ಮ ಬಳಿ ಇರುವ ನೋಟುಗಳ ಮೌಲ್ಯ ಅಳೆಯಬಹುದು.

ಈ ಆ್ಯಪ್ ಮೂಲಕ ಐದು, ಹತ್ತು, ಇಪ್ಪತ್ತು, ಐವತ್ತು, ನೂರು, ಐದನೂರು ಹಾಗೂ ಎರಡು ಸಾವಿರ ರೂಪಾಯಿ ನೋಟುಗಳನ್ನಷ್ಟೇ ಗುರುತಿಸುತ್ತದೆ. ರದ್ದಾದ ನೋಟುಗಳನ್ನು ಗುರುತಿಸದು. ನೋಟು ಅಸಲಿಯೇ ಅಥವಾ ನಕಲಿಯೇ ಎಂಬುದನ್ನೂ ಇದು ದೃಢಪಡಿಸದು. ಒಂದು ವೇಳೆ ನೋಟುಗಳು ನಕಲಿಯೋ ಅಸಲಿಯೋ ಎಂಬುದನ್ನೂ ಈ ಆ್ಯಪ್ ಗುರುತಿಸುವ ಸಾಮರ್ಥ್ಯವನ್ನು ಹೊಂದಿದ್ದರೆ ಅಂಧರು ಸೇರಿದಂತೆ ಎಲ್ಲ ಸಾರ್ವಜನಿಕರಿಗೂ ಇದು ಅನುಕೂಲವಾಗುತ್ತಿತ್ತು. ■

## ಇಂಟರ್‌ನೆಟ್ ಇಲ್ಲದೆಯೂ ಟ್ವೀಟ್ ಮಾಡಿ

ಪ್ರಭಾವಶಾಲಿ ಸಾಮಾಜಿಕ ಜಾಲತಾಣವಾಗಿರುವ ಟ್ವಿಟರ್‌ನಿಂದ ಅಂತರ್ಜಾಲ ಸೌಲಭ್ಯ ಇಲ್ಲದಿದ್ದರೂ ಟ್ವೀಟ್ ಮಾಡುವ ಸೌಲಭ್ಯ ಟ್ವೀಟ್ ಪ್ರಿಯರಿಗೆ ಲಭ್ಯವಾಗಿದೆ. ಹೌದು, ಕಂಪನಿಯು ಈಚೆಗೆ ಈ ಸೌಲಭ್ಯವನ್ನು ಪರಿಚಯಿಸಿದ್ದು ಟ್ವೀಟರ್‌ನ ಒಂದು ಕೋಡ್‌ಗೆ (ನಂಬರ್‌ಗೆ) ಸಾಮಾನ್ಯ ಮೆಸೇಜ್ ಕಳುಹಿಸುವ ಮೂಲಕ ಅಂತರ್ಜಾಲ ಸೌಲಭ್ಯ ಇಲ್ಲದೇ ಟ್ವೀಟ್ ಮಾಡಬಹುದು.



ಈಚೆಗೆ, ಪ್ರಕ್ಷುಬ್ಧತೆ ಉಲ್ಬಣಗೊಳ್ಳುವ ಭೀತಿ ಅಥವಾ ಅದನ್ನು ಹತೋಟಿಗೆ ತರುವ ನಿಟ್ಟಿನಲ್ಲಿ ಈಚೆಗೆ ಸರ್ಕಾರಗಳೇ ಅಂತರ್ಜಾಲ ಸಂಪರ್ಕವನ್ನು ಉದ್ದೇಶಪೂರ್ವಕವಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸುತ್ತಿವೆ. ಜೊತೆಗೆ ಹಲವೆಡೆ ಸಂಪನ್ಮೂಲ ಕೊರತೆಯಿಂದಾಗಿ ಅಂತರ್ಜಾಲ ಸೌಲಭ್ಯ ಇಂದಿಗೂ ಲಭ್ಯವಾಗಿಲ್ಲ. ಇಂತಹ ಪರಿಸ್ಥಿತಿ ಹಾಗೂ ಸ್ಥಳಗಳಿಂದ ಟ್ವೀಟ್ ಮಾಡುವ ಸಂದಿಗ್ದತೆ ಎದುರಾದರೆ ಈ ಹೊಸ ವಿಧಾನದ ಮೊರೆ ಹೋಗಬಹುದು. ಆ ಮೂಲಕ ಸಲೀಸಾಗಿ ಟ್ವೀಟ್ ಮಾಡಬಹುದು.

ದೇಶದ ಯಾವುದೇ ಭಾಗದಲ್ಲಾದರೂ ಗಲಾಟೆ ನಡೆದರೆ, ಟೆಲಿಕಾಂ ಸಚಿವಾಲಯ ಮತ್ತು ಪೊಲೀಸ್ ಇಲಾಖೆಯು ನಿಗದಿತ ಪ್ರದೇಶದಲ್ಲಿ ಇಂಟರ್‌ನೆಟ್ ಸಂಪರ್ಕವನ್ನು ಕಡಿತಗೊಳಿಸುತ್ತದೆ. ಅದರ ಉದ್ದೇಶ ವದಂತಿ ಹರಡುವುದಕ್ಕೆ ಕಡಿವಾಣ ಹಾಗೂ ಗದ್ದಲ ಸೃಷ್ಟಿಸುವುದನ್ನು ತಡೆಯುವುದು. ಮೊಬೈಲ್ ಇಂಟರ್‌ನೆಟ್ ಮತ್ತು ಬ್ರಾಡ್‌ಬ್ಯಾಂಡ್ ಸಂಪರ್ಕ ಕಡಿತಗೊಂಡಿದ್ದರೆ, ಅಂತಹ ಸಂದರ್ಭದಲ್ಲಿ ನೀವು ಟ್ವೀಟ್ ಮಾಡಬಹುದು.

ಇಂಟರ್‌ನೆಟ್ ಇಲ್ಲದೆಯೂ ಟ್ವೀಟ್ ಮಾಡಲು ಟ್ವಿಟ್ಟರ್ ಖಾತೆಗೆ ನಿಮ್ಮ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಬೇಕು. ಲಿಂಕ್ ಆಗಿರುವುದು ಖಾತರಿಯಾದ ಬಳಿಕ ಕಂಪನಿಯು ನೀಡಿರುವ ಟ್ವಿಟರ್ ಕೋಡ್ (ನಂಬರ್) 9248948837ಗೆ ಟ್ವೀಟ್ ಅನ್ನು ಟೈಪಿಸಿ ಕಳುಹಿಸಿದರೆ ಸಾಕು. ನಿಮ್ಮ ಸಂದೇಶ ಟ್ವೀಟ್ ಆದಂತೆ. ಹಾಗೇ ಕಳುಹಿಸಿದ ಕೂಡಲೇ ಟ್ವಿಟರ್ (TWITTR) ಹೆಸರಿನಿಂದ ನಿಮ್ಮ ಸಂದೇಶ ಟ್ವೀಟ್ ಆಗಿದೆಯೇ ಇಲ್ಲವೇ ಎಂಬ ಮಾಹಿತಿ ಮೊಬೈಲ್‌ಗೆ ಎಸ್‌ಎಂಎಸ್ ಮೂಲಕ ಬರುತ್ತದೆ. ■